**<u>ನಮ್ಮ ಮನೆ - ವಸತಿ ನಿರ್ಮಾಣ ಯೋಜನೆ</u>**

ಕೇಂದ್ರ ಸರಕಾರದ ವಸತಿ ಮತ್ತು ನಗರ ಬಡತನ ನಿರ್ಮೂಲನಾ ಇಲಾಖೆಯು ನಗರ ಪ್ರದೇಶಗಳಲ್ಲಿನ ಬಡಜನರಿಗೆ ಬೇರೆಯವರಿಂದ ನಿರ್ಮಿಸಲ್ಪಟ್ಟ ಮನೆಯನ್ನು ಖರೀದಿಸಲು ಅಥವಾ ಅವರ ನಿವೇಶನದಲ್ಲಿ ಮನೆ ಕಟ್ಟಿಕೊಳ್ಳಲು 1.00 ಲಕ್ಷ ರೂ.ಗಳಿಂದ 1.60 ಲಕ್ಷರೂ.ಗಳವರೆಗೆ ಸಾಲ ನೀಡಲು ನಗರದ ಬಡಜನರ ವಸತಿಗಾಗಿ ಬಡ್ಡಿ ಸಹಾಯಧನ ಯೋಜನೆಯನ್ನು (Interest Subsidy Scheme for Housing the Urban Poor - ISHUP) ಜಾರಿಗೆ ತಂದಿದೆ. ಜಿಲ್ಲಾಧಿಕಾರಿಗಳು ಹಾಗೂ ಪೌರಾಡಳಿತ ನಿರ್ದೇಶಕರ ಮುಖಾಂತರ ನಗರ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಈ ಯೋಜನೆಯನ್ನು ರಾಜ್ಯದಲ್ಲಿ ನಮ್ಮ ಮನೆ ಕಾರ್ಯಕ್ರಮದಡಿಯಲ್ಲಿ ಜಾರಿಗೆ ತರಲು ಈ ಕೆಳಗಿನ ಮಾರ್ಗಸೂಚಿಗಳನ್ನು ಹೊರಡಿಸಿದೆ.

**<u>(ಅ) ಫಲಾನುಭವಿಯ ಅರ್ಹತೆ :-</u>**

(1) ಈ ಯೋಜನೆಯಡಿ ಗರಿಷ್ಠ 3,300 ರೂ.ಗಳ ಮಾಸಿಕ ಆದಾಯ ಹೊಂದಿರುವ ಕುಟುಂಬಗಳನ್ನು ಆರ್ಥಿಕವಾಗಿ ಅಶಕ್ತರೆಂದೂ ಹಾಗೂ 3,301 ರೂ.ಗಳಿಗಿಂತ 7,300 ರೂ.ಗಳ ಒಳಗಿನ ಮಾಸಿಕ ಆದಾಯ ಹೊಂದಿರುವ ಕುಟುಂಬಗಳನ್ನು ಕಡಿಮೆ ಆದಾಯದ ಗುಂಪು ಎಂದು ಗೊತ್ತು ಪಡಿಸಲಾಗಿದೆ.

(2) ಆರ್ಥಿಕವಾಗಿ ಅಶಕ್ತರು ಹಾಗೂ ಕಡಿಮೆ ಆದಾಯ ಗುಂಪಿನ ಜನರಿಗೆ ಮನೆ ಖರೀದಿಸಲು ಅಥವಾ ಮನೆ ಕಟ್ಟಿಕೊಳ್ಳಲು ಕೇಂದ್ರ ಸರಕಾರದ ಬಡ್ಡಿ ಸಹಾಯಧನದೊಂದಿಗೆ ಮನೆ ಸಾಲ ನೀಡಲಾಗುತ್ತದೆ. ಆದರೆ ಫಲಾನುಭವಿಯು ತನ್ನ ಹೆಸರಿನಲ್ಲಾಗಲೀ ತನ್ನ ಪತಿ/ಪತ್ನಿಯ ಹೆಸರಿನಲ್ಲಾಗಲೀ ಅಥವಾ ಅವಲಂಬಿತ ಮಗುವಿನ ಹೆಸರಿನಲ್ಲಾಗಲೀ ಸ್ವಂತ ಮನೆಯನ್ನು ಹೊಂದಿರಬಾರದು. ಇಂಥ ಫಲಾನುಭವಿಯು ಪಟ್ಟಣ/ನಗರ ಪ್ರದೇಶದಲ್ಲಿ ನಿವೇಶನ ಹೊಂದಿರಬೇಕು. ಆದರೆ ತನ್ನ ಹೆಸರಿನಲ್ಲಾಗಲೀ, ತನ್ನ ಪತಿ/ಪತ್ನಿಯ ಹೆಸರಿನಲ್ಲಾಗಲೀ ಅಥವಾ ಅವಲಂಬಿತ ಮಗುವಿನ ಹೆಸರಿನಲ್ಲಾಗಲೀ ಯಾವುದೇ ಪಕ್ಕಾ ಮನೆಯನ್ನು ಹೊಂದಿರಬಾರದು.

(3) ಅರ್ಜಿದಾರರು ಸ್ಥಳೀಯ ಪಟ್ಟಣ/ನಗರದ ಖಾಯಂ ವಾಸಿಯಾಗಿರಬೇಕು.

**<u>(ಆ) ಯೋಜನೆಯ ಸೌಲಭ್ಯ :-</u>**

ಈ ಯೋಜನೆಯಡಿ ಆರ್ಥಿಕವಾಗಿ ಅಶಕ್ತ ವ್ಯಕ್ತಿಗೆ ಕನಿಷ್ಠ 25 ಚದರ ಮೀಟರ್‌ಗಳ (269 ಚದರ ಅಡಿಗಳ) ಮನೆ ನಿರ್ಮಾಣಕ್ಕಾಗಿ 15 ರಿಂದ 20 ವರ್ಷಗಳ ಅವಧಿಗೆ ಗರಿಷ್ಠ 1.00 ಲಕ್ಷರೂ.ಗಳ ಮೊತ್ತದ ಸಹಾಯಧನದೊಂದಿಗಿನ ಸಾಲವು ಲಭ್ಯವಿರುತ್ತದೆ. ಹೆಚ್ಚಿನ ಮೊತ್ತದ ಸಾಲ ಬೇಕಾಗಿದ್ದಲ್ಲಿ ಆ ಹೆಚ್ಚಿನ ಮೊತ್ತಕ್ಕೆ ಬಡಿ ಸಹಾಯಧನದ ಸೌಲಭ್ಯವಿರುವುದಿಲ್ಲ. ಇದೇ ರೀತಿ ಕಡಿಮೆ ಆದಾಯದ ಗುಂಪಿನ ವ್ಯಕ್ತಿಗೆ ಕನಿಷ್ಠ 40 ಚದರ ಮೀಟರ್‌ಗಳ (ಸುಮಾರು 430 ಚದರ ಅಡಿಗಳ) ಮನೆ ನಿರ್ಮಾಣಕ್ಕಾಗಿ ಗರಿಷ್ಠ 1.60 ಲಕ್ಷರೂ.ಗಳ ಮೊತ್ತದ ಸಹಾಯಧನದೊಂದಿಗಿನ ಸಾಲವು ಲಭ್ಯವಿರುತ್ತದೆ.

**(ಇ) ಆಯ್ಕೆ ಪ್ರಕ್ರಿಯೆ :-**

1. ಅರ್ಜಿ ನಮೂನೆಗಳು ಎರಡು ಪುಟಕ್ಕೆ ಮಿಕ್ಕದಂತಿದ್ದು, ಅರ್ಜಿದಾರರ ಕುಟುಂಬ ಸ್ವಂತ ಮನೆ ಅಥವಾ ಪಕ್ಕಾ ಮನೆ ಹೊಂದದಿರುವ ಬಗ್ಗೆ, ಕುಟುಂಬದ ಮಾಸಿಕ ವರಮಾನ, ಅದೇ ಸ್ಥಳದ ಖಾಯಂ ವಾಸಿಯಾಗಿರುವ ಬಗ್ಗೆ, ಪರಿಶಿಷ್ಟ ಜಾತಿ/ಪಂಗಡ, ಅಲ್ಪಸಂಖ್ಯಾತ ಅಥವಾ ವಿಕಲಚೇತನರಾಗಿರುವ ಬಗ್ಗೆ ಮುಂತಾದ ದೃಢೀಕರಣದ ವಿವರಗಳನ್ನು ಹೊಂದಿರತಕ್ಕದ್ದು. ಪೌರಾಡಳಿತ ನಿರ್ದೇಶನಾಲಯವು ಅರ್ಜಿ ನಮೂನೆಯನ್ನು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಪೂರೈಸುವುದು.
2. ನಗರ ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಹಾಗೂ ಕಡಿಮೆ ಆದಾಯ ಗುಂಪಿನವರಿಂದ ಅರ್ಜಿಗಳನ್ನು ಆಹ್ವಾನಿಸಿ, ಅರ್ಜಿಗಳನ್ನು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿಗಳ ಮೂಲಕ ಪರಿಶೀಲಿಸಿ ಫಲಾನುಭವಿಗಳ ಆಯ್ಕೆಯನ್ನು ಅಂತಿಮಗೊಳಿಸಿ ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ಸಾಲ ವಿತರಿಸಲು ಅರ್ಜಿಗಳನ್ನು ಶಿಫಾರಸ್ಸು ಮಾಡಬೇಕು.
3. ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿಯಲ್ಲಿ ಆಯಾ ಪ್ರದೇಶದ ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರರು, ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಸದಸ್ಯರಾಗಿದ್ದು, ಸ್ಥಳೀಯ ಸಂಸ್ಥೆಯ ಆಯುಕ್ತರು ಅಥವಾ ಮುಖ್ಯ ಅಧಿಕಾರಿ ಸಮಿತಿಯ ಸಮಾವೇಶಕ ಸದಸ್ಯರಾಗಿರತಕ್ಕದ್ದು.
4. ಪೌರಾಡಳಿತ ನಿರ್ದೇಶನಾಲಯವು ಫಲಾನುಭವಿಗಳ ಆಯ್ಕೆ ಪಟ್ಟಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು, ವಿಕಲಚೇತನರು ಮತ್ತು ಮಹಿಳಾ ಫಲಾನುಭವಿಗಳಿಗೆ ಆಯಾ ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿನ ಜನಸಂಖ್ಯೆಯಲ್ಲಿ ಅವರ ಅನುಪಾತದ ಮೇರೆಗೆ ಆದ್ಯತೆಯನ್ನು ಮೀಸಲಾಗಿರಿಸಲು ಒಂದು ಸೂತ್ರವನ್ನು ನಿರೂಪಿಸಿ ಅದನ್ನು ಪಾಲಿಸುವಂತೆ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ತಿಳಿಸುವುದು.
5. ನಗರ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ನಿಗದಿತ ದಿನಾಂಕದವರೆಗೆ ಸ್ವೀಕರಿಸಿರುವ ಎಲ್ಲಾ ಅರ್ಜಿಗಳನ್ನು ಕ್ರೋಢೀಕರಿಸಿ, ಅರ್ಜಿಗಳು, ಅವಶ್ಯವಿರುವ ಎಲ್ಲಾ ಮಾಹಿತಿಯನ್ನು ಒಳಗೊಂಡಿರುವುದನ್ನು ಮತ್ತು ಅರ್ಜಿದಾರರು ಖರೀದಿಸಬಯಸುವ ಮನೆ ಅಥವಾ ನಿವೇಶನಗಳ ದಾಖಲಾತಿಗಳು ನಿಯಮಾವಳಿಗಳ ಮೇರೆಗೆ ಇರುವುದನ್ನು ಖಚಿತಪಡಿಸಿಕೊಂಡು ಅರ್ಜಿದಾರರ ಪಟ್ಟಿಯನ್ನು ಎಲ್ಲಾ ವಿವರಗಳೊಂದಿಗೆ ವೇಳಾಪಟ್ಟಿಯಂತೆ ಸಿದ್ಧಪಡಿಸಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು.

**(ಈ) ಮನೆ ಖರೀದಿ ಅಥವಾ ಮನೆ ನಿರ್ಮಾಣ :**

1. ಕಡಿಮೆ ಆದಾಯ ಗುಂಪಿನ ಫಲಾನುಭವಿಗಳು ಕನಿಷ್ಟ 40 ಚದರ ಮೀಟರ್‌ಗಳ ಮನೆ ನಿರ್ಮಾಣಕ್ಕಾಗಿ ಅಥವಾ ಮನೆ ಖರೀದಿಗಾಗಿ ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆದು, ಅವಶ್ಯವಿರುವ ಉಳಿದ ಮೊತ್ತವನ್ನು ವಂತಿಗೆ ಮೂಲಕ ಭರಿಸಬಹುದಾಗಿದೆ.

ಉದಾಹರಣೆಗೆ ಹೇಳುವುದಾದರೆ ಬ್ಯಾಂಕು ಫಲಾನುಭವಿಗೆ ಶೇಕಡಾ 8 ರ ಬಡ್ಡಿದರದಲ್ಲಿ ಸಾಲ ನೀಡಿದರೆ ಕೇಂದ್ರ ಸರಕಾರದ ಶೇ. 5 ರ ಬಡ್ಡಿದರದ ಸಹಾಯಧನದೊಂದಿಗೆ ಫಲಾನುಭವಿಯು ಕೇವಲ ಶೇ.3 ರ ಬಡ್ಡಿದರದಲ್ಲಿ ಈ ಕೆಳಗಿನಂತೆ ಮರುಪಾವತಿ ಮಾಡಬೇಕಾಗಿರುತ್ತದೆ.

| | ಸಾಲದ ಮೊತ್ತ | ಸಾಲದ ಅವಧಿ | ಬಡ್ಡಿದರ | ಮಾಸಿಕ ಕಂತಿನ ಮೊತ್ತ |
|---|---|---|---|---|
| 1. | 1,00,000/- | 180 ತಿಂಗಳು | 3% | 680.00 |
| 2. | 1,20,000/- | 180 ತಿಂಗಳು | 3% 1,00,000 ಮತ್ತು 8% 20,000 ಕ್ಕೆ | 680+191=871.00 |
| 3. | 1,50,000/- | 180 ತಿಂಗಳು | 3% 1,00,000 ಮತ್ತು 8% 50,000 ಕ್ಕೆ | 680+478=1158.00 |
| 4. | 1,00,000/- | 240 ತಿಂಗಳು | 3% | 542.00 |
| 5. | 1,20,000/- | 240 ತಿಂಗಳು | 3% 1,00,000 ಮತ್ತು 8% 20,000 ಕ್ಕೆ | 542+167=709.00 |
| 6. | 1,50,000/- | 240 ತಿಂಗಳು | 3% 1,00,000 ಮತ್ತು 8% 50,000 ಕ್ಕೆ | 542+418=960.00 |

2. ಮನೆ ನಿರ್ಮಾಣಕ್ಕೆ ಸಾಲ ಮಂಜೂರಾದ ಫಲಾನುಭವಿಗಳು ತಮ್ಮ ನಿವೇಶನದಲ್ಲಿ ನಿರ್ಮಿತಿ ಕೇಂದ್ರಗಳ ತಾಂತ್ರಿಕ ಸಹಾಯದೊಂದಿಗೆ ತಾವೇ ಮನೆಗಳನ್ನು ಕಟ್ಟಿಕೊಳ್ಳಬಹುದಾಗಿದೆ.
3. ಒಂದು ವೇಳೆ ಫಲಾನುಭವಿಗಳು ತಾವೇ ಮನೆ ಕಟ್ಟಿಕೊಳ್ಳಲಾಗದಿದ್ದಲ್ಲಿ ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮವನ್ನು ಸಂಪರ್ಕಿಸಿ ನಿರ್ಮಿತಿ ಕೇಂದ್ರಗಳು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಗಮ ಅಥವಾ ಇನ್ನಾವುದೇ ಸರ್ಕಾರಿ ಸಂಸ್ಥೆಗಳ ಮುಖಾಂತರ ಮನೆಗಳನ್ನು ನಿರ್ಮಿಸಿಕೊಳ್ಳಬಹುದಾಗಿದೆ.

**(ಉ) ಸಾಲದ ನಿಬಂಧನೆಗಳು :-**

ಮನೆ ನಿರ್ಮಾಣವನ್ನು ಒಂದು ವರ್ಷದೊಳಗಾಗಿ ಪೂರ್ಣಗೊಳಿಸಬೇಕಾಗಿದ್ದು, ಸಾಲವನ್ನು ಮನೆ ನಿರ್ಮಾಣದ ಗತಿಗೆ ಅನುಗುಣವಾಗಿ ನೀಡಲಾಗುವುದು. ಸಾಲದ ನಿಬಂಧನೆಗಳು ಈ ಕೆಳಗಿನಂತಿವೆ.

1. ಆರ್ಥಿಕವಾಗಿ ಅಶಕ್ತ ಹಾಗೂ ಕಡಿಮೆ ಆದಾಯದ ಗುಂಪಿನವರಿಗೆ ಅನುಮತಿಸಿದ ಸಾಲದ ಪೂರ್ಣ ಅವಧಿಗೆ ಸದರಿ ಸಾಲದ ಮೊತ್ತದ ಮೇಲಿನ ಬಡಿಗೆ ಸಹಾಯಧನವು ವಾರ್ಷಿಕ ಶೇಕಡಾ 5 ರಷ್ಟು ಇರುತ್ತದೆ.
2. ಸಾಮಾನ್ಯವಾಗಿ ಸಾಲ ಮರುಪಾವತಿ ಅವಧಿಯನ್ನು 15 ರಿಂದ 20 ವರ್ಷಗಳ ಅವಧಿಗೆ ಅನುಮತಿಸಲಾಗುವುದು.
3. ಸಾಲ ನೀಡುವ ಬ್ಯಾಂಕುಗಳು ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗದರ್ಶಿಕೆಯಂತೆ ಸಮ್ಮತಿಸಿದ ಬಡ್ಡಿದರವನ್ನು ನಿಗದಿಪಡಿಸುತ್ತೇವೆ.
4. ಫಲಾನುಭವಿಗಳು ನಿಗದಿತ ಅಥವಾ ಅಲ್ಪಕಾಲಿಕ ಬಡ್ಡಿದರವನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.
5. ಈ ಯೋಜನೆಯು 2012 ಕ್ಕೆ ಮುಕ್ತಾಯಗೊಳ್ಳುತ್ತದೆ.